ಸುಳ್ಳು ಹೇಳಬೇಕೆ ಅದನ್ನೇ ಹೇಳುತ್ತೇವೆ. ಹೌದು, ಆ ರೀತಿ ನಡೆಯುತ್ತಿದೆ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು, ಅಧಿಕಾರಿಗಳು ಈ ರೀತಿಯಾಗಿ ಮಾಡಿದ್ದಾರೆಂಬ ಸತ್ಯವನ್ನೇ ನಾವು ಹೇಳುತ್ತಿದ್ದೇವೆ, ಮತ್ತೆ ಮಾನ್ಯ ಸದಸ್ಯರು ವಿಷಯ ಸಮಿತಿಯ ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪ ಮಾಡಿದರು, ವಿಷಯ ಸಮಿತಿಯಲ್ಲಿ ಅಧಿಕಾರಿಗಳು ಕನ್ನಡವನ್ನು ಮಾತನಾಡಿಲ್ಲವೆಂದು ಈಗಾಗಲೇ ಮೂರು ಜನ ಐ.ಎ.ಎಸ್. ಅಧಿಕಾರಿಗಳು, ಅವರು ಮಾನ್ಯ ಬುಳ್ಳಾಸುಬ್ಬರಾವ್, ಶ್ರೀ ಲಕ್ಷ್ಮೀನಾರಾಯಣ್ ಹಾಗೂ ಶ್ರೀಮತಿ ಶಮೀಮ್ ಭಾನು ಇವರುಗಳಿಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಅವರಿಗೆ ಎಚ್ಚರಿಕೆಯನ್ನು ಕೊಡುವುದರ ಮೂಲಕ, ಮುಂದೆ ಈ ರೀತಿಯ ಲೋಪಗಳು ಆಗದಂತೆ, ಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಈ ಅಧಿಕಾರಿಗಳು ತಪ್ಪನ್ನು ಒಪ್ಪಿಕೊಂಡು, ಮುಂದೆ ಈ ರೀತಿ ತಪ್ಪು ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂಬ ಹೇಳಿಕೆಯನ್ನು ನೀಡಿದ್ದಾರೆಂಬ ವಿಚಾರವನ್ನು ನಾನು ಈ ಸಭೆಯ ಮೂಲಕ ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

ಉಪಾಧ್ಯಕ್ಷರು : ಇಲ್ಲಿ ಎಲ್ಲರ ಅಭಿಪ್ರಾಯಗಳು ಒಂದೇ ಆಗಿದೆ, ನೀವು ಕನ್ನಡವನ್ನು ಬಳಸದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕೆಂಬುದು ಆಗಿದೆ, ನೀವು ಮಾಡುತ್ತೇವೆಂದು ಹೇಳುವುದಲ್ಲ, ಮಾಡಿದ್ದನ್ನು ಹೇಳಬೇಕು, ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು.

ಶ್ರೀಮತಿ ರಾಣಿ ಸತೀಶ್ : ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ನೇರವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂಬ ವಿಚಾರವನ್ನು ಹೇಳಿದ್ದೇನೆ, ಈ ಇಲಾಖೆಯಡಿಯಲ್ಲಿ ಶಿಸ್ತಿನ ಪ್ರಾಧಿಕಾರ ಏನು ಇದೆ, ಪ್ರತಿಯೊಂದು ಇಲಾಖೆಯ ಪ್ರಾಧಿಕಾರದ ಮೂಲಕ ಶಿಸ್ತನ್ನು ಅನುಷ್ಠಾನ ಮಾಡುವಂತಹ ಕೆಲಸವನ್ನು ಆ ಇಲಾಖೆ ಮಾಡಬೇಕು, ಅದನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಉಪಾಧ್ಯಕ್ಷರು : ಆಯಿತು.

ಬಾಗಲಕೋಟೆ ಜಿಲ್ಲೆಯ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾದ ನಿರಾಶ್ರಿತರಿಗೆ ಪುನರ್ವಸತಿ ಕೇಂದ್ರಗಳಲ್ಲಿ ಮನೆಗಳನ್ನು ನೀಡುವ ಬಗ್ಗೆ

5259 : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆ ನಿರಾಶ್ರಿತರಾಗಿ ಪುನರ್ವಸತಿ ಕೇಂದ್ರಗಳಲ್ಲಿ ಮಂಜೂರು ಮಾಡಿರುವ ಮನೆಗಳ ಸಂಖ್ಯೆ ಎಷ್ಟು;

ಆ) ಜಿಲ್ಲೆಯಲ್ಲಿ ಒಟ್ಟು ಮುಳುಗಡೆ ಪ್ರದೇಶಗಳೆಷ್ಟು; ಆ ಗ್ರಾಮಗಳಿಗೆಲ್ಲಾ ಸದರಿ ಯೋಜನೆಯಡಿ ಆಶ್ರಯ ಮನೆಗಳನ್ನು ನೀಡಲಾಗಿದೆಯೇ; ಎಷ್ಟನ್ನು ನೀಡಲಾಗಿದೆ; (ವಿವರ ನೀಡುವುದು)

ಇ) ಆಶ್ರಯ ಯೋಜನೆಯಡಿ ಇನ್ನೂ ಮಂಜೂರು ಮಾಡಲು (ಹಂಚಿಕೆ) ಬಾಕಿ ಉಳಿದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಯಾವಾಗ ಹಂಚಿಕೆ ಕಾರ್ಯ ಮುಗಿಸಲಾಗುವುದು; (ವಿವರ ನೀಡುವುದು)

ಎ) ಒಟ್ಟು ಮುಳುಗಡೆ ಪ್ರದೇಶದಲ್ಲಿ ಎಷ್ಟು ಪ್ರದೇಶಕ್ಕೆ ಮನೆಗಳನ್ನು ನೀಡಬೇಕಾಗಿದೆ; (ವಿವರ ಒದಗಿಸುವುದು)?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ: ವಇ 102 ಹೆಚ್ ಎಹೆಚ್ 2002 ದಿನಾಂಕ: 13-11-2002 ರಲ್ಲಿ ಮುಳುಗಡೆ ನಿರಾಶ್ರಿತರಿಗೆ ವಸತಿ ಸೌಕರ್ಯ ಕಲ್ಪಿಸಲು ಗ್ರಾಮೀಣ ಆಶ್ರಯ ವಸತಿ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ 4000 ಮನೆಗಳ ಗುರಿಯನ್ನು ನೀಡಲಾಗಿದೆ.

ಆ) ಮುಳುಗಡೆ ಪ್ರದೇಶಗಳ ಬಗ್ಗೆ ಈ ಇಲಾಖೆಯಲ್ಲಿ ಮಾಹಿತಿ ಇರುವುದಿಲ್ಲ.

ಇ) ಸಧ್ಯಕ್ಕೆ ಉದ್ಭವಿಸುವುದಿಲ್ಲ.

ಈ) ವಸತಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನು ಆಶ್ರಯ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆ ನಿರಾಶ್ರಿತರಾಗಿ ಪುನರ್ವಸತಿ ಕೇಂದ್ರಗಳಲ್ಲಿ ಮಂಜೂರು ಮಾಡಿರುವ ಮನೆಗಳ ಸಂಖ್ಯೆ ಎಷ್ಟು? ಎಂದು ಕೇಳಿರುವುದಕ್ಕೆ 4,000 ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ, ಇಲ್ಲಿ ಮುಳ್ಳುಗಡೆಯ ಪ್ರಶ್ನೆ ಬಂದಾಗ ಬಾಗಲಕೋಟೆಯ ಹೆಸರು ಬಂದಾಗ, ಬಿಜಾಪುರದ ಹೆಸರು ಅಲ್ಲಿ ಬರುವುದಿಲ್ಲ, ಏಕೆಂದರೆ ಬಿಜಾಪುರದ 75 ಗ್ರಾಮಗಳು ಆಲಮಟ್ಟಿಯಲ್ಲಿ ಮುಳುಗಡೆಯಾಗುತ್ತವೆ, ಅದರಲ್ಲಿ ಮುಖ್ಯ ಸಚೇತಕರ ಮುದ್ದೇಬಿಹಾಳ ತಾಲ್ಲೂಕ್‌ನಲ್ಲಿ 45 ಗ್ರಾಮಗಳು, ಮತ್ತೆ ನನ್ನ ಕ್ಷೇತ್ರದಲ್ಲಿ ಬಾಗೇವಾಡಿ ಮತ್ತು ಬಿಜಾಪುರ ತಾಲ್ಲೂಕಿನಲ್ಲಿ ಸುಮಾರು 18 ಗ್ರಾಮಗಳು, ಮಾನ್ಯ ಕೃಷಿ ಸಚಿವರ ಕ್ಷೇತ್ರದಲ್ಲಿ ಸುಮಾರು 10 ಗ್ರಾಮಗಳು, ಸುಮಾರು 75 ಗ್ರಾಮಗಳು ಬಿಜಾಪುರ ಜಿಲ್ಲೆಯಲ್ಲಿರುವಂತಹ ಗ್ರಾಮಗಳು ಆಲಮಟ್ಟಿಯಲ್ಲಿ ಹೆಚ್ಚಿಗೆ ಮುಳುಗಡೆಯಾಗಿದೆ, ಅದರಲ್ಲಿ ನನ್ನ ಕ್ಷೇತ್ರದ 18 ಗ್ರಾಮಗಳಲ್ಲಿ ಬಸವನ ಬಾಗೇವಾಡಿ ತಾಲ್ಲೂಕಿನ ಕೋಲಾರ ಗ್ರಾಮ ಬಸವನ ಬಾಗೇವಾಡಿಯ ನಂತರ ಇದು ಸುಮಾರು ದೊಡ್ಡ ಗ್ರಾಮವಾಗಿದೆ, 14 ಸಾವಿರ ಜನಸಂಖ್ಯೆ ಇರುವಂತಹ ದೊಡ್ಡ ಗ್ರಾಮವಾಗಿದೆ, ಕೋಲಾರ, ಬಳುತಿ, ಹಳೆರೊಳ್ಳಿ, ಬಿಜಾಪುರ ತಾಲ್ಲೂಕಿನ ಹಂಗರಗಿ, ಬೆಳ್ಳುಬ್ಬಿ, ಸಂತಗುಂಡಿ, ಬೈನಾಪುರ, ಹಳ್ಳದಗೆಣ್ಣೂರ, ಹೊಸೂರು, ತನಗೂರು, ಜಂಬಗಿ, ಈ ರೀತಿಗಾಯಾಗಿ ಒಟ್ಟು 15 ಗ್ರಾಮಗಳು ಬರುತ್ತದೆ.

ಉಪಾಧ್ಯಕ್ಷರು : ಏನಿದು, ತಾವು ಏನು ಪ್ರಶ್ನೆಯನ್ನು ಕೇಳಬೇಕು, ಅದನ್ನು ಕೇಳಿ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಉಪಾಧ್ಯಕ್ಷರೇ, ತಾವು ಈಗ 4,000 ಮನೆಗಳನ್ನು ಮುಳುಗಡೆ ಪ್ರದೇಶದ ಜನರಿಗೆ ನಿಗದಿ ಮಾಡಿದ್ದೀರಿ, ಅದರಲ್ಲಿ ಕನಿಷ್ಟ ಪಕ್ಷ 2,000 ಮನೆಗಳನ್ನು ನನ್ನ ಕ್ಷೇತ್ರಕ್ಕೆ ಕೊಡಬೇಕು, ನಾನು ಇದನ್ನು ಕಳೆದ ಎರಡು ವರ್ಷದಿಂದ ಕೇಳುತ್ತಾ ಬಂದಿದ್ದೇನೆ, ಇದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಆದುದರಿಂದ ಮಾನ್ಯ ಸಚಿವರು, ಈ ಸದನದಲ್ಲಿ ನನ್ನ ಕ್ಷೇತ್ರಕ್ಕೆ ಸುಮಾರು 2,000 ಮನೆಗಳನ್ನು ಮುಳುಗಡೆಯ ನಿರಾಶ್ರಿತರಿಗೆ ಪ್ರತ್ಯೇಕವಾಗಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಯವರು ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಮುಳುಗಡೆಯಾಗಿರುವ ಪ್ರದೇಶದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ, ಇದು ಸ್ಥಳಾಂತರಿಸುವಂಥಾದ್ದು ಮತ್ತು ಪರಿಹಾರ ನೀಡುವಂಥಾದ್ದು, ಮತ್ತೆ ಎರಡನೆಯದಾಗಿ ಆ ಭಾಗದ ಶಾಸಕರ ಕೈಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಯಾವ್ಯಾವ ಹಳ್ಳಿಗಳಲ್ಲಿ, ಈ ಜನರನ್ನು ಸ್ಥಳಾಂತರಿಸಲಾಗಿದೆಯೋ, ಅಂತಹ ಹಳ್ಳಿಗಳಲ್ಲಿ ವಾಸಿಸುತ್ತಿರುವಂತಹ ಜನರನ್ನು ಆಯ್ಕೆ ಮಾಡಿ, ಮನೆಗಳನ್ನು ವಿತರಣೆ ಮಾಡುವಂಥಾದ್ದಕ್ಕೆ ಸರ್ಕಾರ ಆದೇಶವನ್ನು ಹೊರಡಿಸಿ, ಇದಕ್ಕೆ ನಾಲ್ಕು ಸಾವಿರ ಮನೆಗಳನ್ನು ಕೊಟ್ಟಿದ್ದೇವೆ, ಅವರೇ ಈ ಮನೆಗಳನ್ನು ಹಂಚಿಕೆ ಮಾಡುವಂತಹ ಕೆಲಸವನ್ನು ಮಾಡಬೇಕು, ಇವರು ಮನೆಗಳು ಕಡಿಮೆ ಇದೆಯೆಂಬ ಮಾಹಿತಿಯನ್ನು ಈಗಾಗಲೇ ನನಗೆ ಕೊಟ್ಟಿದ್ದಾರೆ, ನನ್ನ ಕ್ಷೇತ್ರದಲ್ಲಿ ಕೆಲವು ಮನೆಗಳ ಅಗತ್ಯವಿದೆಯೆಂದು, ದಯಮಾಡಿ ಹೆಚ್ಚುವರಿ ಮನೆಗಳನ್ನು ಕೊಡಿಸಿಕೊಡುವಂಥಾದ್ದು, ಎಂದು ಈಗಾಗಲೇ ಒಂದು ಪ್ರಸ್ತಾವನೆಯನ್ನು ನನ್ನ ಮುಂದೆ ಇಟ್ಟಿದ್ದಾರೆ, ಈ 4,000 ಮನೆಗಳ ವಿತರಣೆಯಾದ ನಂತರ, ಇದರಲ್ಲಿ ಇವರು ಮನೆ ಬೇಕೆಂದು, ತಿಳಿಸಿದಾಗ, ನಾನು ಅವರ ಬೇಡಿಕೆಯನ್ನು ಮನ್ನಿಸುತ್ತೇನೆಂದು, ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ನನ್ನ ಮಾತಿಗೆ ಒಪ್ಪಿಗೆ ಸೂಚಿಸಿದ್ದಾರೆ, ಅದಕ್ಕೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ, ಇದರ ಜೊತೆಗೆ ಆಶ್ರಯ ಮನೆಗಳನ್ನು ಕೊಡಬೇಕೆಂದು ವಿಚಾರ ಮಾಡಿದಾಗ, ಪುನರ್ವಸತಿ ಕೇಂದ್ರಗಳು ಏನಿವೆ, ಅವು ಇನ್ನು ಪಂಚಾಯತ್‌ನವರಿಗೆ ಹ್ಯಾಂಡ್‌ಅವರ್ ಆಗಿಲ್ಲ, ಅವು ಇನ್ನೂ ಆರ್ ಅಂಡ್ ಆರ್‌ನ ಅಡಿಯಲ್ಲೇ ಇವೆ, ಅದಕ್ಕೆ ನೀವು ಮನೆಗಳನ್ನು ಹಾಕಿದರೂ ಕೂಡ ಅದಕ್ಕೆ ಅಲ್ಲಿ ಜಾಗವಿಲ್ಲ, ಅದಕ್ಕೆ ಪುನರ್ವಸತಿ ಅಧಿಕಾರಿಗಳಿಗೆ, ಬಾಗಲಕೋಟೆಯ ಕಮೀಷನರ್‌ರವರಿಗೆ, ಒಂದು ಆದೇಶವನ್ನು ಮಾಡಬೇಕು. ಆಶ್ರಯ ಮನೆಗಳನ್ನು ಇದ್ದಂತಹ ಪುನರ್ವಸತಿಯ ಕೇಂದ್ರಗಳಲ್ಲಿ, ಆ ಫಲಾನುಭವಿಗಳಿಗೆ ನಿವೇಶನಗಳನ್ನು ಕೊಡಬೇಕೆಂಬ ಆದೇಶವನ್ನು ತಾವು ಕಳುಹಿಸಿಕೊಟ್ಟರೆ ಒಳ್ಳೆಯದು, ಇಲ್ಲದಿದ್ದರೆ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಈಗ ಸಮಿತಿಯೆಂದು ಏನು ಮಾಡಿದ್ದೇವೆ, ಅವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಅವರು ನಿರ್ಣಯವನ್ನು ಮಾಡಿ, ಆ ಹಳ್ಳಿಯಲ್ಲಿ ವಾಸಿಸುತ್ತಿರುವಂತಹ ಜನಗಳಿಗೆ ಈ ಅನುಕೂಲತೆಯನ್ನು ಒದಗಿಸಿಕೊಡಬೇಕು, ಮಾನ್ಯ ಸದಸ್ಯರು ಇದು ಆಗಿಲ್ಲವೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಇದರ ಬಗ್ಗೆ ಅಧಿಕಾರಿಗಳೊಡನೆ ಚರ್ಚೆ ಮಾಡಿ, ತಕ್ಷಣವೇ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಉಪಾಧ್ಯಕ್ಷರೇ, ಈ ಮನೆಗಳನ್ನು ಹಂಚುವಾಗ, ಇದು ಆಶ್ರಯ ಕಮಿಟಿಯೆಂದು ಆಗಬಾರದು, ಆ ಮನೆಗಳನ್ನು ಲಾಟರಿ ಮುಖಾಂತರ ಹಂಚುವಂತೆ ಆಗಬೇಕು, ಈ ರೀತಿ ಮಾಡಿದರೆ ಅನುಕೂಲವಾಗುತ್ತದೆ, ತಾವು ಈ ವಿಚಾರವನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರುಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಅವರೇ ನೇರವಾಗಿ ವಿತರಣೆ ಮಾಡುತ್ತಾರೋ, ಮಾಡಲಿ, ಇಲ್ಲ, ಲಾಟರಿಯ ಮುಖಾಂತರ ಮಾಡುವುದಾದರೆ ಮಾಡಿ, ಮಾನ್ಯ ಎಸ್.ಎಸ್. ಪಾಟೀಲ್‌ರವರೇ, ಲಾಟರಿ ಎನ್ನುವ ಪದಕ್ಕೆ ಕನ್ನಡದಲ್ಲಿ ಏನು ಹೇಳಬೇಕು?

ಶ್ರೀ ಎಸ್.ಎಸ್. ಪಾಟೀಲ್ : ಚೀಟಿ ಎತ್ತುವುದು, ಎಂದು ಹೇಳಬಹುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಚೀಟಿ ಎತ್ತುವ ಮುಖಾಂತರ ಮಾಡುವುದಾದರೆ ಮಾಡಲಿ, ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ಅವರ ಕೈಗೆ ಅಧಿಕಾರವನ್ನು ಕೊಟ್ಟು ನಾಲ್ಕು ಜನರನ್ನು ನಾಮಿನೇಟ್ ಮಾಡಿ ಬಿಡಿ, ಚೀಟಿ ಏಕೆ ಎತ್ತಬೇಕು? ಸರ್ಕಾರ ಏಕೆ ತಲೆ ಹಾಕಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಚೀಟಿ ಎತ್ತುವಂಥಾದ್ದು, ಚೀಟಿ ವ್ಯವಹಾರವಾಗಬಾರದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಎಸ್.ಎಸ್. ಪಾಟೀಲ್‌ರವರು, ಚೀಟಿ ಎತ್ತುವುದು ಎಂದರೆ, ಏನೆಂಬುದರ ಬಗ್ಗೆ, ವಿವರವಾಗಿ ವಿಚಾರವನ್ನು ಹೇಳಬೇಕು.

ಶ್ರೀ ಹೆಚ್.ಎಸ್. ಪುಟ್ಟರಂಗನಾಥ್ : ಮಾನ್ಯ ಉಪಾಧ್ಯಕ್ಷರೇ, ಮುಳುಗಡೆಯಾದಂತಹ ಪ್ರದೇಶದಲ್ಲಿ, ಸ್ಥಳಾಂತರಗೊಳಿಸಿರುವಂತಹ ಫಲಾನುಭವಿಗಳಿಗೆ, ಮನೆಗಳು ಜಾಸ್ತಿ ಇರುವಂತಹ ಕಡೆಗಳಲ್ಲಿ ಕೊಡುತ್ತೀರಿ, ಎಲ್ಲೆಲ್ಲಿ ಡ್ಯಾಮ್‌ಗಳು ಆಗಿವೆ, ಅಂತಹ ಪ್ರದೇಶಗಳಲ್ಲಿ, ತಾವು ಕೊಡಬೇಕಾಗುತ್ತದೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತಹ ವಿಚಾರವನ್ನು ನಾನು ಪರಿಶೀಲಿಸುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯ್ತಿಗಳ ವಿದ್ಯುತ್ ಬಿಲ್ ಬಾಕಿ

608 (5285) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯ್ತಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಈ ಗ್ರಾಮ ಪಂಚಾಯ್ತಿಗಳು ಬಹಳ ಕಾಲದಿಂದ ವಿದ್ಯುತ್ ಬಿಲ್ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಇ) ವಿದ್ಯುತ್ ಬಿಲ್ ಬಾಕಿ ಮೊತ್ತ ಮತ್ತು ಅದಕ್ಕೆ ವಿಧಿಸಿರುವ ಬಡ್ಡಿ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)

ಈ) ಬಡ್ಡಿ ಮೊತ್ತವೇ ಬಹಳ ಆಗಿರುವುದರಿಂದ ಅಭಿವೃದ್ಧಿಗೆ ಮೀಸಲಾದ ಹಣ ಇದಕ್ಕೆ ಉಪಯೋಗಿಸಿದರೆ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗುವುದಿಲ್ಲವೆ

ಉ) ವಿದ್ಯುತ್ ಬಿಲ್ ಬಾಕಿ ಆಗಿ ಬೃಹತ್ ಮೊತ್ತದ ಬಡ್ಡಿಗೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ, ಇಲ್ಲದಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?